
# ಅಧ್ಯಾಯ I
# ಪರಿಚಯ



# ಅಧ್ಯಾಯ 1 – ಪರಿಚಯ

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್‌ಡಿಪಿಆರ್) ಅಡಿಯಲ್ಲಿನ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್), ರಾಜ್ಯದಲ್ಲಿ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳ ಅನುಷ್ಠಾನ ಮತ್ತು ಆಸ್ತಿಗಳ ರಚನೆಯಲ್ಲಿ ತೊಡಗಿಸಿಕೊಂಡಿದೆ. ಇದು 1971ರಲ್ಲಿ ಭೂ ಸೇನೆಯ ನಿರ್ದೇಶನಾಲಯವಾಗಿ ಪ್ರಾರಂಭವಾಯಿತು ಮತ್ತು ಕರ್ನಾಟಕ ಸರ್ಕಾರದ ಸಂಪೂರ್ಣ ಮಾಲೀಕತ್ವದ ಅಡಿಯಲ್ಲಿ 'ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ (ಕೆಎಲ್‌ಎಸಿ)' ಎಂದು ಸ್ಥಾಪಿಸಲಾಯಿತು (ಆಗಸ್ಟ್ 1974) ಮತ್ತು ಆಗಸ್ಟ್ 2009ರಲ್ಲಿ 'ಕೆಆರ್‌ಐಡಿಎಲ್' ಎಂದು ಮರುನಾಮಕರಣ ಮಾಡಲಾಯಿತು.

## 1.1 ಕೆಆರ್‌ಐಡಿಎಲ್‌ನ ಉದ್ದೇಶಗಳು


ಈ ಕೆಳಗಿನವುಗಳು ಕಂಪನಿಯ ಉದ್ದೇಶಗಳಾಗಿದ್ದವು

- ನಿರುದ್ಯೋಗಿಗಳು ಮತ್ತು ಕಡಿಮೆ ಆದಾಯದ ಉದ್ಯೋಗದಲ್ಲಿರುವ ಗ್ರಾಮೀಣ ಯುವಕರಿಗೆ ಅವರ ಕೌಶಲ್ಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಲು ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕಾರ್ಮಿಕ ಆಧಾರಿತ ಕಾಮಗಾರಿಗಳ ಅನುಷ್ಠಾನ.
- ಹೆಚ್ಚಿನ ವೆಚ್ಚ ಮತ್ತು ಗ್ರಾಮೀಣ ಬಡವರ ಶೋಷಣೆಯನ್ನು ತಪ್ಪಿಸಲು ಮಧ್ಯವರ್ತಿಗಳನ್ನು ತೊಡೆದುಹಾಕುವ ಮೂಲಕ ಎಲ್ಲಾ ಗ್ರಾಮೀಣ ಅಭಿವೃದ್ಧಿ ಸಿವಿಲ್ ಕಾಮಗಾರಿಗಳನ್ನು ಸ್ವತಃ ನೇರವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಅನುಷ್ಠಾನಗೊಳಿಸುವುದು ಮತ್ತು ಆ ಮೂಲಕ ಹಣದ ಪೂರ್ಣ ಮೌಲ್ಯವನ್ನು ಜನರಿಗೆ ತಲುಪಿಸುವುದು.
- ಸಮಗ್ರ ಪ್ರದೇಶಾಭಿವೃದ್ಧಿ, ಜಲಸಂಪನ್ಮೂಲ ಅಭಿವೃದ್ಧಿ, ಹೈನುಗಾರಿಕೆ, ಮೀನುಗಾರಿಕೆ, ಸಣ್ಣ ನೀರಾವರಿ, ಗ್ರಾಮೀಣ ಸಂಪರ್ಕ, ಸೇತುವೆಗಳು, ರಸ್ತೆಗಳು, ಕಟ್ಟಡ ನಿರ್ಮಾಣಗಳಂತಹ ಶಾಲೆಗಳು, ಆಸ್ಪತ್ರೆಗಳು, ವಸತಿ ಕಟ್ಟಡಗಳು ಹಾಗೂ ಮಣ್ಣು ಸಂರಕ್ಷಣೆಯಂತಹ ಅಭಿವೃದ್ಧಿಗೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಸಹಾಯ ಮಾಡುವುದು.

## 1.2 ಸಂಘಟನಾ ವ್ಯವಸ್ಥೆ

ವ್ಯವಸ್ಥಾಪಕ ನಿರ್ದೇಶಕರು (ಎಮ್‌ಡಿ) ಕಂಪನಿಯ ಮುಖ್ಯಸ್ಥರಾಗಿರುತ್ತಾರೆ. ಕೆಆರ್‌ಐಡಿಎಲ್‌ನ ಚಟುವಟಿಕೆಗಳನ್ನು ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಂಡ ನಿರ್ದೇಶಕರ ಮಂಡಳಿಯು ನಿಯಂತ್ರಿಸುತ್ತದೆ ಮತ್ತು ನಿರ್ವಹಿಸುತ್ತದೆ. 1 ಆಗಸ್ಟ್ 2021 ರಂತೆ, ಕೆಆರ್‌ಐಡಿಎಲ್ ಮೂರು ಮುಖ್ಯ ಇಂಜಿನಿಯರ್‌ಗಳನ್ನು (ಸಿಇ) ಹೊಂದಿದ್ದು, ಅವರ ಅಡಿಯಲ್ಲಿ 6 ವಲಯಗಳು, 41 ವಿಭಾಗಗಳು ಮತ್ತು 90 ಉಪ–ವಿಭಾಗಗಳು (ಪ್ರಾಜೆಕ್ಟ್ ಇಂಪ್ಲಿಮೆಂಟಿಂಗ್ ಯೂನಿಟ್‌ಗಳು ಎಂದೂ ಸಹ ಕರೆಯಲ್ಪಡುತ್ತವೆ) ಕಾರ್ಯನಿರ್ವಹಿಸುತ್ತಿವೆ. ಇವುಗಳು ಕೆಳಗೆ ನಕ್ಷೆ 1.1ರಲ್ಲಿ ತೋರಿಸಿರುವಂತೆ, ಅನುಕ್ರಮವಾಗಿ ಅಧೀಕ್ಷಕ ಇಂಜಿನಿಯರ್ (ಎಸ್‌ಇ), ಕಾರ್ಯನಿರ್ವಾಹಕ ಇಂಜಿನಿಯರ್ (ಇಇ) ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಇಇ) ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತವೆ.

**ನಕ್ಷೆ–1.1: ಕಂಪನಿಯ ಸಾಂಸ್ಥಿಕ ವ್ಯವಸ್ಥೆ**




ಆಧಾರ: ಕೆಆರ್‌ಐಡಿಎಲ್‌ನ ವಾರ್ಷಿಕ ವರದಿ

## 1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಪರಿಶೀಲಿಸುವುದು ಲೆಕ್ಕಪರಿಶೋಧನೆಯ ಉದ್ದೇಶವಾಗಿತ್ತು:

- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯಿದೆ, 1999ರ ಸೆಕ್ಷನ್ 4(ಜಿ) ನಿಬಂಧನೆಗಳನ್ನು ಅನ್ವಯಿಸುವ ಮೂಲಕ ಕೆಆರ್ಐಡಿಎಲ್‌ಗೆ ಕಾಮಗಾರಿಗಳನ್ನು ವಹಿಸಿಕೊಡುವ ಸರ್ಕಾರದ ಇಲಾಖೆಗಳ ಕ್ರಮವು ಸಮರ್ಥನೀಯವಾಗಿತ್ತೇ;
- ಒಪ್ಪಿಸಲಾದ ಕೆಲಸಗಳನ್ನು ಕೆಆರ್ಐಡಿಎಲ್ ಸಮರ್ಥವಾಗಿ, ಪರಿಣಾಮಕಾರಿಯಾಗಿ ಮತ್ತು ಆರ್ಥಿಕವಾಗಿ ನಿಗದಿಪಡಿಸಿದ ಗುಣಮಟ್ಟದ ಮಾನದಂಡಗಳಿಗೆ ಬದ್ಧವಾಗಿ ನಿರ್ವಹಿಸಿತ್ತೇ;
- ನಿರ್ಮಾಣ ಸಾಮಗ್ರಿಗಳು, ಕಾರ್ಮಿಕರು ಮತ್ತು ಯಂತ್ರೋಪಕರಣಗಳ ಖರೀದಿಯನ್ನು ಕೆಆರ್ಐಡಿಎಲ್ ಆರ್ಥಿಕ ಮಿತವ್ಯಯಕಾರಿಯಾಗಿ ಮತ್ತು ನೇರವಾಗಿ ಮಾಡಿತ್ತೇ;
- ಲೆಕ್ಕಪತ್ರ ವ್ಯವಸ್ಥೆ/ತೆರಿಗೆ ಮತ್ತು ಉತ್ತಮ ಆಂತರಿಕ ನಿಯಂತ್ರಣ ವ್ಯವಸ್ಥೆ ಜೊತೆಗೆ ಕಾಮಗಾರಿ ವಹಿಸಿಕೊಡುವ ಇಲಾಖೆಗಳೊಂದಿಗೆ ಸಮನ್ವಯವು ಅಸ್ತಿತ್ವದಲ್ಲಿತ್ತೇ;

## 1.4 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮಾನದಂಡಗಳಾಗಿದ್ದವು:

- ಸ್ಥಾಯಿ ಆದೇಶಗಳು, ಕೆಎಲ್ಎಸಿ/ಕೆಆರ್ಐಡಿಎಲ್ ಖರೀದಿ ಮತ್ತು ಕಾರ್ಯಾಚರಣೆ ಕೈಪಿಡಿ.
- ಲೋಕೋಪಯೋಗಿ ಇಲಾಖೆ/ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ (ಪಿಆರ್ಇಡಿ) ಮತ್ತು ಸರ್ಕಾರದ ಇತರ ಇಲಾಖೆಗಳು ನಿಗದಿಪಡಿಸಿದ ದರಪಟ್ಟಿ/ಪ್ರಮುಖ ಸಾಮಗ್ರಿಗಳ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳು).
- ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ (ಮಾರ್ತ್)/ಗ್ರಾಮೀಣಾಭಿವೃದ್ಧಿ ಸಚಿವಾಲಯ/ಭಾರತೀಯ ರಸ್ತೆ ಕಾಂಗ್ರೆಸ್ (ಐಆರ್‌ಸಿ) ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಮ್‌ಜಿಎಸ್‌ವೈ) ಕಾರ್ಯಕ್ರಮದ ಮಾರ್ಗಸೂಚಿಗಳು.
- ಕರ್ನಾಟಕ ಲೋಕೋಪಯೋಗಿ ಇಲಾಖೆ ಲೆಕ್ಕಪತ್ರ ಕೋಡ್ ಮತ್ತು ಕರ್ನಾಟಕ ಲೋಕೋಪಯೋಗಿ ಇಲಾಖೆ ಕಾಮಗಾರಿಗಳ ಕೋಡ್/ಕೈಪಿಡಿ, ಕೆಟಿಪಿಪಿ ಕಾಯಿದೆ, ಕರ್ನಾಟಕ ಹಣಕಾಸು ಸಂಹಿತೆ.
- ಭಾರತ ಸರ್ಕಾರ/ರಾಜ್ಯ ಸರ್ಕಾರದ ಆದೇಶಗಳು, ರಾಜ್ಯ ಸರ್ಕಾರದಿಂದ ಹೊರಡಿಸಿದ ಸೂಚನೆಗಳು/ಮಾರ್ಗಸೂಚಿಗಳು/ಕಾಮಗಾರಿ ವಹಿಸುವ ಇಲಾಖೆಗಳ ಆದೇಶಗಳು, ಮಂಡಳಿಯ ಸಭೆಗಳ ನಡಾವಳಿಗಳು, ಗುತ್ತಿಗೆ ಒಪ್ಪಂದದ ದಾಖಲೆಗಳು ಇತ್ಯಾದಿ.
- ಕಾಮಗಾರಿ ವಹಿಸಿಕೊಡುವ ಸಂಸ್ಥೆಗಳು/ಕಂಪನಿಯಿಂದ ಕಾಲಕಾಲಕ್ಕೆ ತಯಾರಿಸಲಾದ ಕ್ರಿಯಾ ಯೋಜನೆಗಳು.

## 1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

2016–17 ರಿಂದ 2020–21ರ ಅವಧಿಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜುಲೈ 2021 ರಿಂದ ಮಾರ್ಚ್ 2022ರ ಅವಧಿಯಲ್ಲಿ ಕೆಆರ್ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ಎಲ್ಲಾ ಆರು

ವಲಯಗಳನ್ನು[1] ಒಳಗೊಂಡಂತೆ 24 ಉಪ–ವಿಭಾಗಗಳ ಕಚೇರಿಗಳ ದಾಖಲೆಗಳ ಪರೀಕ್ಷಾ–ತನಿಖೆಯ ಮೂಲಕ ನಡೆಸಲಾಯಿತು. ಉಪ–ವಿಭಾಗಗಳ ಆಯ್ಕೆಗಾಗಿ ಲೆಕ್ಕಪರಿಶೋಧನೆಯು ಯಾದೃಚ್ಛಿಕ ಮಾದರಿ ವಿಧಾನವನ್ನು ಅಳವಡಿಸಿಕೊಂಡಿತು ಮತ್ತು **ಅನುಬಂಧ–I**ರಲ್ಲಿ ತೋರಿಸಿರುವಂತೆ ಪ್ರತಿ ಆರು ವಲಯಗಳಿಂದ ನಾಲ್ಕು ಉಪ–ವಿಭಾಗಗಳನ್ನು ಆಯ್ಕೆಮಾಡಲಾಗಿದೆ. ಪ್ರತಿ ಆಯ್ದ ಉಪ–ವಿಭಾಗದೊಳಗಿನ ಕಾಮಗಾರಿಗಳ ಆಯ್ಕೆಯು ಕಾಮಗಾರಿಗಳ ಆರ್ಥಿಕ ಮೌಲ್ಯವನ್ನು ಆಧರಿಸಿದೆ. ಅದರಂತೆ, ಆಯ್ದ ಉಪವಿಭಾಗಗಳಲ್ಲಿ ಕಾರ್ಯಗತಗೊಂಡ ಒಟ್ಟಾರೆ 37,906 ಕಾಮಗಾರಿಗಳಲ್ಲಿ 1,379 ಕಾಮಗಾರಿಗಳನ್ನು ಪರೀಕ್ಷಾ–ತನಿಖೆಗೆ ಆಯ್ಕೆ ಮಾಡಲಾಗಿದೆ. ಉಪ–ವಿಭಾಗಗಳ ಅನುಸಾರ ಆಯ್ದ ಕಾಮಗಾರಿಗಳ ವಿವರಗಳನ್ನು **ಅನುಬಂಧ–II**ರಲ್ಲಿ ತೋರಿಸಲಾಗಿದೆ. ಕೆಆರ್ಐಡಿಎಲ್‌ನ ಎಇಇ/ಸಿಬ್ಬಂದಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆಯನ್ನು ಸಹ ನಡೆಸಲಾಯಿತು.

18 ಆಗಸ್ಟ್ 2021ರಂದು ನಡೆದ ಪ್ರವೇಶ ಸಮಾವೇಶದ ಸಂದರ್ಭದಲ್ಲಿ ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ವಿಧಾನವನ್ನು ಆರ್‌ಡಿಪಿಆರ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಚರ್ಚಿಸಲಾಯಿತು. ಆರ್‌ಡಿಪಿಆರ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರೊಂದಿಗೆ ನಿರ್ಗಮನ ಸಮಾವೇಶವನ್ನು 13 ಜುಲೈ 2022 ರಂದು ನಡೆಸಲಾಯಿತು.

## 1.6 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ರಾಜ್ಯ ಸರ್ಕಾರ, ಆರ್‌ಡಿಪಿಆರ್ ಇಲಾಖೆ, ಬೆಂಗಳೂರಿನ ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕರ ಕಚೇರಿ ಮತ್ತು ಪರೀಕ್ಷಾ–ತನಿಖೆ ನಡೆಸಲಾದ ಉಪ–ವಿಭಾಗಗಳು ನೀಡಿದ ಸಹಕಾರ ಮತ್ತು ಸಹಾಯಕ್ಕೆ ಲೆಕ್ಕಪರಿಶೋಧನೆಯು ಕೃತಜ್ಞತೆ ಸಲ್ಲಿಸುತ್ತದೆ.

## 1.7 ಲೆಕ್ಕಪರಿಶೋಧನೆಯ ಫಲಿತಾಂಶಗಳ ಜೋಡಣೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳನ್ನು ಈ ಕೆಳಗಿನಂತೆ ಲೆಕ್ಕಪರಿಶೋಧನಾ ಉದ್ದೇಶಗಳಿಗೆ ಅನುಗುಣವಾಗಿ ಸಂಯೋಜಿಸಲಾಗಿದೆ:

ಅಧ್ಯಾಯ 2: ಹಣಕಾಸು ನಿರ್ವಹಣೆ

ಅಧ್ಯಾಯ 3: ಕಾಮಗಾರಿಗಳ ವಹಿಸುವಿಕೆ, ಅಂದಾಜುಪಟ್ಟಿಗಳು ಮತ್ತು ಅನುಮೋದನೆಗಳು

ಅಧ್ಯಾಯ 4: ಕಾಮಗಾರಿಗಳ ಅನುಷ್ಠಾನ

ಅಧ್ಯಾಯ 5: ಲೆಕ್ಕಪತ್ರ ನಿರ್ವಹಣೆ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆ

[1] ಬೆಳಗಾವಿ, ಬೆಂಗಳೂರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸೆಂಟ್ರಲ್, ಕಲಬುರಗಿ ಮತ್ತು ಮೈಸೂರು.